**ದಿನಾಂಕಃ 27-06-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಸ್.ವಿ. ವಕೀಲರಿಂದಃ**

ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ ತಂದೆ ಕುಟುಂಬದ ಯಜಮಾನರಾಗಿರುತ್ತಾರೆ. ನಾನು ಮದುವೆಯಾದ 14 ವರ್ಷದಿಂದ ಗಂಡನ ಮನೆಯಲ್ಲಿ ವಾಸವಿರುತ್ತೇನೆ.

2. ನಮ್ಮ ಕುಟುಂಬಕ್ಕೆ 19 ಆಸ್ತಿಗಳು ಇರುತ್ತವೆ, ಆದರೆ 2 ಸ.ನಂ.ಗಳನ್ನು ಬಿಟ್ಟು ಉಳಿಕೆ ಆಸ್ತಿಗಳ ಸ.ನಂ., ವಿಸ್ತೀರ್ಣ ಮತ್ತು ಚೆಕ್ಕುಬಂದಿ ಗೊತ್ತಿಲ್ಲ. ನನ್ನ ತಂದೆ ನಮ್ಮನ್ನು ಮತ್ತು ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನನ್ನ ತಂದೆ 3 ನೇ ತರಗತಿಯವರೆಗೆ ಓದಿಕೊಂಡು ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ, ಆದರೆ ಹೆಬ್ಬೆಟ್ಟಿನ ದಾಖಲೆ ನನ್ನ ಬಳಿ ಇಲ್ಲ. ನನ್ನ ತಂದೆ ವಿದ್ಯಾವಂತರಾದ ಕಾರಣ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿರುವಾಗ ನಮ್ಮಗಳ ಮಧ್ಯೆ ವೈಮನಸ್ಸು ಇರಲಿಲ್ಲ. ನನ್ನ ತಂದೆ 2 ನೇ ಪ್ರತಿವಾದಿ ಏನು ತಕರಾರು ಹಾಕಿರುತ್ತಾರೆಂದು ಗೊತ್ತಿಲ್ಲ. ನನ್ನ ತಾತ ಗೂಳದ ಈರಣ್ಣ ಬದುಕಿರುವಾಗ ಆತನ ಮಕ್ಕಳು ಮತ್ತು ತಾತ ಎಲ್ಲಾರು ಸೇರಿ 1990 ರಲ್ಲಿ ಕುಟುಂಬದ ಆಸ್ತಿಗಳ ಮೇಲೆ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಗೆ 4 ನೇ ದಾವಾ ಸ್ವತ್ತಿನ 15 ಕುಂಟೆ ಮತ್ತು ನಿವೇಶನ ಸಂ.137 ರ ಅರ್ಧ ಭಾಗ ಬಂದು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಮೃತರಾದ ನಂತರ ಸದರಿ ಆಸ್ತಿಗಳಲ್ಲಿ ನನ್ನ ತಮ್ಮ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ದಾವಾ ಆಸ್ತಿಗಳ ಪೈಕಿ ಯಾವ ಆಸ್ತಿಯಲ್ಲೂ ಸ್ವಾಧೀನ ಇರುವುದಿಲ್ಲ. 4 ನೇ ದಾವಾ ಸ್ವತ್ತಿನ ಅರ್ಧ ಭಾಗದಲ್ಲಿ ವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

3. ನನ್ನ ಚಿಕ್ಕಪ್ಪ ಬಸವರಾಜ್ ರವರು ನ್ಯಾಯಬೆಲೆ ಅಂಗಡಿ ನಡೆಸುತ್ತಿದ್ದು, ನಂತರ ಅವರ ಹೆಂಡತಿ 4 ನೇ ಪ್ರತಿವಾದಿ ನಡೆಸುತ್ತಿದ್ದರು ಎಂದರೆ ಸರಿ. ನನ್ನ ಚಿಕ್ಕಪ್ಪ ಸಣ್ಣ-ಪುಟ್ಟ ಕಾಮಗಾರಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಸ.ನಂ.282/2 ರ ಆಸ್ತಿಯನ್ನು

ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಬೋರ್ ವೆಲ್ ಮತ್ತು ಅಡಿಕೆ ತೋಟ ಇದ್ದು ಅದರಲ್ಲಿ ನನ್ನ ತಮ್ಮ ಮತ್ತು ತಾಯಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸ.ನಂ.282/2 ರ ಜಮೀನು ಮೂಲತಃ ನನ್ನ ತಾತ ಗೂಳದ ಈರಣ್ಣನಿಗೆ ಸೇರಿರುತ್ತದೆ. ಹಾಲಿ ಸ.ನಂ.282/2 ರಲ್ಲಿ ಯಾರು ಸ್ವಾಧೀನ ಇರುತ್ತಾರೆಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ 5 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಸ.ನಂ.282/2 ನನ್ನ ತಂದೆ ಖರೀದಿ ಮಾಡಿದ್ದರು ಸಹ ನನ್ನ ತಂದೆ ಮಾಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರದವರು ನನ್ನ ತಂದೆ ಮತ್ತು ಚಿಕ್ಕಪ್ಪ, ತಾತನವರಿಗೆ ತಲಾ ಒಂದು ಒಂದು ನಿವೇಶನ ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಗಂಡ ಖರೀದಿ ಮಾಡಿರುವ ಆಸ್ತಿಗಳು ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಆಸ್ತಿ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನಾದ ಬಸವರಾಜ್ ರವರಿಗೆ ಸೇರಿದ ಆಸ್ತಿಯಲ್ಲಿ ಅವರ ಹೆಂಡತಿ ಮತ್ತು ಮಕ್ಕಳಿಗೆ ಬಿಟ್ಟು ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ.

4. ವಾದಿ ಸರ್ಕಾರ ಕೊಟ್ಟ ನಿವೇಶನದಲ್ಲಿ ಮನೆ ಕಟ್ಟಿಕೊಂಡು ವಾಸವಿರುತ್ತಾರೆ, ಸಾಕ್ಷಿ ಮುಂದುವರೆದು ಹೊಂದಾಣಿಕೆ ಇಲ್ಲದೆ ಕಾರಣ ಬೇರೆ ವಾಸವಿರುತ್ತಾರೆ. ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪನವರು ಪ್ರತ್ಯೇಕವಾಗಿ ಹೊಂದಾಣಿಕೆ ಇಲ್ಲದ ಕಾರಣ ವಾಸ ಮಾಡುತ್ತಿರುತ್ತಾರೆ. ನನ್ನ ತಂದೆಯವರು ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿರುವಾಗ ದಾವೆ ಇರುವ ಬಗ್ಗೆ ಗೊತ್ತಿರುತ್ತದೆ. ನನ್ನ ತಂದೆ ಮೃತರಾದ ನಂತರ ವಾದಿ ಜೊತೆ ಶಾಮೀಲಾಗಿ ಸುಳ್ಳು ತಕರಾರನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.